ಆ) ಇದರಿಂದಾಗಿ, ಸಾರ್ವಜನಿಕರು, ಆತಂಕಕ್ಕೆ ಒಳಗಾಗಿರುವುದನ್ನು ಸರ್ಕಾರವು ಮನಗಂಡಿದೆಯೇ,

ಇ) ಸೆಕ್ಷನ್ 45 (ಬಿ) ಅನ್ನು ಪರಿಷ್ಕರಿಸಿ ವೈಜ್ಞಾನಿಕವಾಗಿ ಆಸ್ತಿ ಮೌಲ್ಯ ಮತ್ತು ತೆರಿಗ ನಿರ್ಧಾರಿಸುವ ಪದ್ಧತಿಯನ್ನು ರಾಜ್ಯದ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಜಾರಿಗೆ ತರಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ

ಆ) ಹೌದು

ಇ) ಈಗಾಗಲೇ ಕಂದಾಯ ಇಲಾಖೆಯಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ ಕಲಂ 45ಬಿ ರನ್ವಯ 2004–05 ನೇ ಸಾಲಿನ ಆಸ್ತಿ ಮೌಲ್ಯ ನಿರ್ಧರಿಸಲು ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಲಾಗಿದೆ

ರಾಜ್ಯದಲ್ಲಿ ಕೃಷಿ ನೀರಾವರಿ ಸೌಲಭ್ಯಕ್ಕಾಗಿ ಬಳಸುವ ಐ ಪಿ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ

8 (185) ಶ್ರೀ ಆತ್ಮಾನಂದ ಎಂ ಎಸ್ (ಮಂಡ್ಯ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿಗಾಗಿ ಉಪಯೋಗಿಸುವ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಲು, ಕೃಷಿಕರಿಂದ ಅರ್ಜಿಗಳನ್ನು ಸ್ವೀಕರಿಸುತ್ತಾ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಕೃಷಿಯ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲು ನಿರ್ಬಂಧ ಇದೆಯೇ

ಆ) ಕೃಷಿಯಲ್ಲಿ ನೀರಾವರಿ ಸೌಲಭ್ಯಕ್ಕಾಗಿ ಐ ಪಿ ಸಟ್ ಗಳಿಗೆ ಹೊಸದಾಗಿ ಯಾವಾಗಿನಿಂದ ವಿದ್ಯುತ್ ಸಂಪರ್ಕ ಒದಗಿಸಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಕೃಷಿ ಪಂಪ್‌ಸೆಟ್‌ಗಳಿಗಾಗಿ ವಿದ್ಯುತ್ ಸಂಪರ್ಕ ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ ಕಪ್ಪು ಹಾಗೂ ಬೂದು ತಾಲ್ಲೂಕುಗಳನ್ನು ಹೊರತು ಪಡಿಸಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲು ನಿರ್ಬಂಧ ಇರುವುದಿಲ್ಲ

ಆ) ಪ್ರಸ್ತುತ ನೀರಾವರಿ ಪಂಪ್‌ಸೆಟ್‌ಗಳಿಗೆ ಹೊಸದಾಗಿ ಸ್ವಯಂ ಪರಿವರ್ತಕ ಹೊಂದುವ ಯೋಜನೆ ಎಂಬ ಹೊಸ ಯೋಜನೆ (Own Your Transformer) ಅಡಿಯಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ

ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ವಿತರಣಾ ವ್ಯವಸ್ಥೆಯ ಆಧುನೀಕರಣದ ಬಗ್ಗೆ

10 (187) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿನ ಪ್ರಸ್ತುತ ಕುಡಿಯುವ ನೀರಿನ ಯೋಜನೆಯಲ್ಲಿನ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಆಧುನೀಕರಣಗೊಳಿಸಬೇಕಾದ ಅವಶ್ಯಕತೆಯನ್ನು ಸರ್ಕಾರವು ಮನಗಂಡಿದೆಯೇ

ಆ) ಹಾಗಿದ್ದಲ್ಲಿ ಸರ್ಕಾರವು ಈ ದಿಶೆಯಲ್ಲಿ ಕೈಗೊಂಡಿರುವ ಕ್ರಮಗಳೇನು

ಇ) ಕುಡಿಯುವ ನೀರಿನ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಆಧುನೀಕರಣಗೊಳಿಸುವ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಅ) ಹೌದು

ಆ) ಮಂಡ್ಯ ನಗರದ ನೀರು ಸರಬರಾಜು ವಿತರಣಾಜಾಲದ ಆಧುನೀಕರಣ ಮತ್ತು ಮೊದಲನೇ ಹಂತದ ನೀರು ಸರಬರಾಜು ಯೋಜನೆಯ ಪುನರುಜ್ಜೀವನಗೊಳಿಸುವ ಯೋಜನೆಗೆ ರೂ 675 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ

ಇ) ಪರಿಶೀಲನೆಯಲ್ಲಿದೆ

ಪ್ರತಿ ಜಿಲ್ಲಾ ಎಸ್ ಪಿ ಕಛೇರಿಯಲ್ಲಿ ಪಾಸ್‌ಪೋರ್ಟ್ ನೀಡುವ ಅಧಿಕಾರದ ಬಗ್ಗೆ

12 (274) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಾಸ್‌ಪೋರ್ಟ್ ಕಛೇರಿಗಳು ಎಷ್ಟಿವೆ

ಆ) ಆಯಾ ಜಿಲ್ಲೆಗಳಲ್ಲಿ ಎಸ್ ಪಿ ಯವರಿಗೆ ಪಾಸ್‌ಪೋರ್ಟ್ ನೀಡುವ ಅಧಿಕಾರ ಕೊಡುವ ಕುರಿತು ಸರ್ಕಾರದ ಕ್ರಮ ಕೈಗೊಂಡಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ)

ಅ) ರಾಜ್ಯದಲ್ಲಿ ಒಂದು ರಿಜನಲ್ ಪಾಸ್‌ಪೋರ್ಟ್ ಕಛೇರಿ, ಬೆಂಗಳೂರಿನಲ್ಲಿದೆ (ಈ ಕಛೇರಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ)

ಆ) ಉದ್ಭವಿಸುವುದಿಲ್ಲ

ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು

14 (277) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ವಿಚಾರ ಈಗ ಯಾವ ಹಂತದಲ್ಲಿದೆ,

ಆ) ಹೈಕೋರ್ಟ್ ಪೀಠ ಸ್ಥಾಪನೆ ವಿಚಾರದಲ್ಲಿ ನ್ಯಾಯಮೂರ್ತಿಗಳ ಸಮಿತಿ ನೀಡಿರುವ ವರದಿಯ ಪ್ರಮುಖ ಅಂಶಗಳೇನು

ಇ) ನ್ಯಾಯಮೂರ್ತಿಗಳ ಸಮಿತಿ ಯಾವಾಗ ವರದಿ ನೀಡಿದೆ ವರದಿ ನೀಡಿ ಇಷ್ಟು ದಿನಗಳು ಕಳೆದರೂ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು

ಈ) ಹೈಕೋರ್ಟ್ ಪೀಠ ಸ್ಥಾಪನೆ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಅ) ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಪರಿಶೀಲನೆಯಲ್ಲಿದೆ

ಆ) ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ

ಇ) ನ್ಯಾಯಮೂರ್ತಿಗಳ ಸಮಿತಿ ದಿನಂಕ 6-6-2003 ರಂದು ಗೌರವಾನ್ವಿತ ಮುಖ್ಯ ನ್ಯಾಯಾಧೀಶರಿಗ ವರದಿ ನೀಡಿದ್ದು ವರದಿಯಲ್ಲಿನ ಅಂಶಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ